ಯಾವಾಗಲೂ ಚಿತ್ರವಾಗಿ, ಛಾಯಾಚಿತ್ರವಾಗಿ ತೋರಿಸುವಾಗ, 'ಹಳ್ಳಿಯವರೆಲ್ಲರೂ ತಾತಂದಿರು, ನಗರದವರು ಅಂಕಲ್‌ಗಳು' ಎಂಬರ್ಥದ ಸಮಾಜೋ–ಭಾಷಾಂತರ ರಾಜಕಾರಣದ ಮಿಂಚು ಹೊಳೆಯದಿರದು.

ಮುಂಬಯಿಯ ಕಲಾವಿದ ಅತುಲ್ ದೊಡ್ಡಿಯ ಅವರ 'ಬಾಪು ಅಟ್ ರೇನ್ ಬ್ಲಾಕ್ ಗ್ಯಾಲರಿ, ನ್ಯೂಯಾರ್ಕ್, 1974' ಕೃತಿ ವಿಶಿಷ್ಟವಾಗಿ ಗಾಂಧಿಯನ್ನು ವ್ಯಾಖ್ಯಾನಕ್ಕೊಡ್ಡುವ ಅಪರೂಪದ ಕೃತಿಗಳ ಸಾಲಿಗೆ ಸೇರುತ್ತದೆ. ಈ ಚಿತ್ರದಲ್ಲಿ ಜೋಸೆಫ್ ಬಾಯ್ಸ್ ಎಂಬ ಜರ್ಮನ್ ತತ್ತ್ವಾಧಾರಿತ ಕಲಾವಿದನ 1974ರ ಅಭಿನಯಾತ್ಮಕ ಕಲೆಯನ್ನು ಗಾಂಧಿಯ ತತ್ತ್ವದೊಂದಿಗೆ ಮಿಳಿತಗೊಳಿಸಲಾಗಿದೆ. ಅಮೆರಿಕದ ನೆಲದಲ್ಲಿ ಕಾಲಿಡದೆ, ಸ್ಟ್ರೆಚರ್ ಮೇಲೆ ಮಲಗಿ, ಅಲ್ಲಿನ ರೇನ್ ಬ್ಲಾಕ್ ಗ್ಯಾಲರಿಯಲ್ಲಿ ಅಮೆರಿಕದ ಮೂಲನಿವಾಸಿ ಇಂಡಿಯನ್ನರ ನೆಚ್ಚಿನ ಸಾಕುಪ್ರಾಣಿ ಕೋಯೋಟ್‌ನೊಂದಿಗೆ, ಆ ದೇಶದ ಆರ್ಥಿಕತೆಯನ್ನು ಸಂಕೇತಿಸುವ ವಾಲ್ ಸ್ಟ್ರೀಟ್ ಮ್ಯಾಗಜಿನ್ ದಿನಪತ್ರಿಕೆಗಳೊಂದಿಗೆ ವಾರಕಾಲ ತನ್ನನ್ನು ರಕ್ಷಿಸಿಕೊಂಡು ಬದುಕಿದ 'ಬಾಯ್ಸ್' ಎಂಬ ಕಲಾವಿದ ನಂತರ ಹಾಗೆಯೇ ಬಲಪಂಥೀಯ ಅಮೆರಿಕದ ಮೇಲೆ 'ಕಾಲಿಡದೆ' ಹಿಂತಿರುಗಿದ್ದ ತನ್ನೂರಿಗೆ. ಆ ಕೋಣೆಯೊಳಕ್ಕೆ, ಐದು ಬಾರಿ ನೊಬೆಲ್ ಪ್ರಶಸ್ತಿಗೆ ನಾಮಾಂಕಿತಗೊಂಡಿದ್ದರೂ ದೊರಕದ ಗಾಂಧಿಯನ್ನು ಆಹ್ವಾನಿಸುವುದರ ಮೂಲಕ ಕಲಾವಿದ, ಕೇವಲ ದೊಡ್ಡಿಯ ದೃಶ್ಯ ನಿರ್ಮಿತಿಯ ಮೂಲಕವೇ ಸಮಾಜಶಾಸ್ತ್ರೀಯ ತತ್ತ್ವಜಿಜ್ಞಾಸೆಯೊಂದನ್ನು ಏರ್ಪಡಿಸುತ್ತಾರೆ. ಪರಿಸರವಾದ ಹಾಗೂ ಸಮಾಜೋ–ರಾಜಕೀಯ ಪ್ರಜ್ಞೆಯ 'ಬಾಯ್ಸ್' ಜನಸಂಪರ್ಕದೊಂದಿಗಿನ ಸಂವಾದವನ್ನು 'ಸಾಮಾಜಿಕ ಶಿಲ್ಪಿ' ಎಂದು ಕರೆದುಕೊಳ್ಳುತ್ತಿದ್ದರು. ಇಂತಹ ತಾತ್ತ್ವಿಕ ಜಿಜ್ಞಾಸೆಯೊಳಗೆ ಗಾಂಧಿಯನ್ನು ಬರಮಾಡಿಕೊಳ್ಳುವ ಮೂಲಕ ಗಾಂಧಿಯನ್ನು ಕಲಾವಿದ 'ದೊಡ್ಡಿಯ ಮಹಾತ್ಮ'ನನ್ನಾಗಿಸಿ ದೃಶ್ಯ–ಜಿಜ್ಞಾಸುವನ್ನಾಗಿಸುತ್ತಾರೆ. ಅನಕ್ಷರಸ್ಥರಿಗೂ ಗಾಂಧೀಜಿ ಗುರುತಿರುವಾಗ, ಅವರ ಮಹತ್ತ್ವವನ್ನು ಓದದೆಯೂ ತಿಳಿಸಿಕೊಡಬಹುದೆಂಬ ಪರಿಕಲ್ಪನೆಗೆ ಈ ಚಿತ್ರ ಮುಖೇನವಾದ ವ್ಯಾಖ್ಯಾನ ಸಹಾಯಕ.

★★★

ಗಾಂಧಿಯವರನ್ನು ಚಿತ್ರಿಸುವ ಉದ್ಯಮದಲ್ಲಿ ಅವರ ಕಪ್ಪುಬಿಳುಪಿನ ಛಾಯಾಚಿತ್ರಗಳನ್ನು ಆಧರಿಸಿ, ಅವರ ದೈನಂದಿನ ವಿಶೇಷ ಘಟ್ಟಗಳನ್ನು ರೇಖಾಚಿತ್ರಗಳನ್ನಾಗಿಸುವುದು ಒಂದು ಉಪ ಅಧ್ಯಾಯವಾಗಿದೆ. 1930ರಿಂದ ಒಂಬತ್ತು ದಶಕಗಳ ಕಾಲ ಗಾಂಧಿಯನ್ನು ದೃಶ್ಯಕಲೆಗೆ ವಿಶೇಷವಾದ ಆಯಾಮಗಳಿಂದ ಶೋಧಿಸುವ ಸಂಕೀರ್ಣ ಕ್ರಿಯೆ ಸಹಜವಾಗಿ ನಡೆಯುತ್ತಿದೆ, ಪಕ್ಷಾತೀತವಾಗಿ. ಮಾಧ್ಯಮಗಳಾಚೆಗಿನ ಗುಣವನ್ನು ಪಕ್ಷಾತೀತ ಎನ್ನಬಹುದು, ಕಲೆಯ ದೃಷ್ಟಿಯಿಂದ. ಜೊತೆಗೆ, ಗಾಂಧಿಯನ್ನು ಸರಿಗಟ್ಟಲು ಇತರೆ ಅನೇಕ ಭಾರತೀಯ ನಾಯಕರುಗಳನ್ನು ಅವರ ಕುಲ, ಗೋತ್ರ, ಮತಗಳನ್ನಾಧರಿಸಿ, ಚಿತ್ರದ ವಸ್ತುವನ್ನಾಗಿಸಿದ (ಉದಾಹರಣೆಗೆ ಟ್ಯಾಗೋರ್, ಪಟೇಲ್, ನೆಹರು, ಪೆರಿಯಾರ್ ಮುಂತಾಗಿ) ಪ್ರಯತ್ನವೆಲ್ಲವೂ ಅಮೂರ್ತ ಪ್ರಯತ್ನಗಳಾಗಿ, ತದನಂತರ ಅಸಂಗತತೆಯ ಕಡೆ ಮುಖ ಮಾಡಿದ್ದು ಗಮನಿಸಿದರೆ ಕಲಾತ್ಮಕ ವಿಷಯವಾಗಿ ಗಾಂಧಿಯ ಪಕ್ಷಾತೀತ ಗುಣದ ಅಂದಾಜು ಸಿಕ್ಕಬಹುದು. ಹೀಗೆ ಜಗತ್ತಿನ ಇತಿಹಾಸದಲ್ಲಿ ಸುಲಭಕ್ಕೆ ಬಗೆಹರಿಯಲಾಗದ




ಎಸ್.ಎಚ್. ರಾಝು ಅವರ ಗಾಂಧಿ ಕುರಿತ ಅಮೂರ್ತ ಕೃತಿ